

ಆಸ್ಪತ್ರೆಯೊಂದರ ಶವಾಗಾರದ ಎದುರು ಮಹಿಳೆಯರ ರೋದನ

ರೋಗನಿಯಂತ್ರಣ ಮತ್ತು ಪರಿಹಾರ ಕೇಂದ್ರದಲ್ಲಿ ಎಲ್ಲ ಬಗೆಯ ವಿಷ ಸೇವನೆಯ, ವೈದ್ಯಕೀಯ ಸಮಸ್ಯೆಗಳ ಚರ್ಚೆ ಇದೆ (ಸದ್ಯದ ಕೊರೊನಾ ಚಿಕ್ಕಟ್ಟಿಗೂ ಜಗತ್ತಿನ ತಜ್ಞರೆಲ್ಲ ಅಲ್ಲಿಗೇ ಆಗಾಗ ಹೊಸ ಮಾಹಿತಿಗಾಗಿ ಭೇಟಿ ಕೊಡುತ್ತಿರುತ್ತಾರೆ). ಸ್ಟೈರೀನ್ ಅನಿಲದ ಸೇವನೆಯ ಪರಿಣಾಮವನ್ನು ಅದರಲ್ಲಿ ಸ್ಪಷ್ಟವಾಗಿ ಕೊಡಲಾಗಿದೆ. ಉಸಿರು ಕಟ್ಟಿದಂತಾಗುತ್ತದೆ, ಸುಸ್ತಾಗುತ್ತದೆ, ಕಣ್ಣಿಗೆ ಕತ್ತಲು ಕವಿಯುತ್ತದೆ, ತಲೆ ನೋಯುತ್ತದೆ. ತುಸು ಹೊತ್ತಿನ ಬಳಿಕ ಸಾರಾಯಿ ಕುಡಿದವರಂತೆ ದೇಹದ ಸಮತೋಲ ತಪ್ಪುತ್ತದೆ. ಎದುರಿನ ದೃಶ್ಯಗಳಲ್ಲಿನ ಬಣ್ಣಗಳು ಕಲಸುಮೇಲೋಗರ ಆಗುತ್ತವೆ ಎಂಬೆಲ್ಲ ವಿವರಗಳಿವೆ. ಅದೇ ದೇಶದ ಪರಿಸರ ಮಾಲಿನ್ಯ ನಿಗಮದ ಮಾಹಿತಿಗಳ ಪ್ರಕಾರ, ದೀರ್ಘ ಕಾಲ ಸ್ಟೈರೀನ್ ಅನಿಲ ಸೇವನೆ ಮಾಡಿದರೆ ನೆನಪಿನ ಶಕ್ತಿ ಕುಂದುತ್ತದೆ, ಕಿವಿ ಮಂದವಾಗುತ್ತದೆ, ನರಮಂಡಲಕ್ಕೆ ಧಕ್ಕೆಯಾಗುತ್ತದೆ. ಹಾಗಿದ್ದರೆ ಸಾವು ಕೂಡ ಸಂಭವಿಸುತ್ತದೆಯೆ? ಈ ಕೊನೆಯ ಪ್ರಶ್ನೆಗೆ ಮಾತ್ರ ಉತ್ತರ ಅದರಲ್ಲಿಲ್ಲ. ಏಕೆಂದರೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಗಂಟೆಗಟ್ಟಲೆ ಅನಿಲ ಸೇವನೆ ಮಾಡಿದರೆ ಏನಾದೀತು ಎಂಬ ಪ್ರಯೋಗ ಪರೀಕ್ಷೆಯೇ ಅಲ್ಲಿ ನಡೆದಿರಲಿಲ್ಲ. ಹಾಗಿದ್ದರೆ ವಿಶಾಖಪಟ್ಟಣದ ಈ ಕಾರ್ಖಾನೆಯ ದುರಂತದಲ್ಲಿ ಹನ್ನೊಂದು ಜನರ ಸಾವಿಗೆ ಕಾರಣವೇನು? ಬೇರೆ ಏನಾದರೂ ಅನಿಲ ಅದರ ಜೊತೆ ಮಿಶ್ರಣವಾಗಿತ್ತೇ? ತನಿಖೆಯ ನಂತರವೇ ಉತ್ತರ ಸಿಗಬೇಕು, ಹೊಸದೊಂದು ಪಾಠ ನಮಗೆ ಲಭಿಸಬೇಕು. ಇದುವರೆಗೆ ಲಭಿಸಿದ್ದು ಏನೆಂದರೆ 'ಸ್ಟೈರೀನ್ ಅನಿಲ ತೀರ ಗಂಭೀರ ವಿಷವೇನಲ್ಲ' ಎಂಬ ಹೇಳಿಕೆ ಮಾತ್ರ.

## ಭೋಪಾಲದ ನೆನಪು ಮತ್ತೆ ಮತ್ತೆ

ಭೋಪಾಲ ದುರಂತದಿಂದ ಕಲಿತ ಪಾಠ ಹೇಗಿದೆ ನೋಡಿ: ಭೋಪಾಲದಲ್ಲಿ ಸಂತ್ರಸ್ತರ ಆಕ್ರಂದನ ಹೆಚ್ಚುತ್ತ ಹೋದಂತೆ ಜಗತ್ತಿನೆಲ್ಲೆಡೆ ಮೀಥೈಲ್ ಐಸೊಸೈನೇಟ್ ಬಗೆಗೆ ವಿಶೇಷ ಅಧ್ಯಯನಗಳು ನಡೆದವು. ಅಮೆರಿಕದಲ್ಲಿ ವಿಷರಸಾಯನಗಳ ಉತ್ಪಾದನೆಯ ಸುರಕ್ಷಾ ಕ್ರಮಗಳು ಅಲ್ಲಿ ಬಿಗಿಯಾಗುತ್ತ ಹೋದವು. ಇದೇ ಯೂನಿಯನ್ ಕಾರ್ಬೈಡ್ ಕಂಪನಿಯ ಆರ್ಸೈನ್ ಫಾಸ್ಟೈನ್ ಕಾರ್ಖಾನೆಯನ್ನು ದೂರ ಸ್ಥಳಾಂತರಿಸಲಾಯಿತು. ತೀರ ಅಪಾಯಕಾರಿ ಎನಿಸಿದ ಹನ್ನೆರಡು ಬಗೆಯ ಕೀಟನಾಶಕಗಳಿಗೆ ನಿಷೇಧ ಹಾಕಲಾಯಿತು. ಅಲ್ಲಿನ ಎಲ್ಲ ಕಾರ್ಖಾನೆಗಳೂ ತಾವೇನು ಉತ್ಪಾದಿಸುತ್ತೇವೆ, ಅದರಿಂದ ಏನೇನು ಅಪಾಯ ಬಂದೀತು, ಹೇಗೆ ಬಚಾವಾಗಬೇಕು ಎಂಬುದನ್ನು ಕಾರ್ಖಾನೆಯ ಸುತ್ತಲಿನ ನಿವಾಸಿಗಳಿಗೆ ಕಡ್ಡಾಯ ತಿಳಿಯಪಡಿಸುವಂತೆ ಇಪಿಸಿಆರ್‌ಎ ಕಾನೂನನ್ನು ಅಮೆರಿಕ ಜಾರಿಗೆ ತಂದಿತು.

ನಮ್ಮಲ್ಲಿ ಅಂಥದ್ದೇನೂ ಗಂಭೀರ ಕ್ರಮಗಳು ಜಾರಿಯಾಗಲಿಲ್ಲ. ನಮ್ಮ ನೆರೆಹೊರೆಯ ಫ್ಯಾಕ್ಟರಿಗಳಲ್ಲಿ ಏನೇನು ಉತ್ಪಾದನೆ ಆಗುತ್ತಿದೆ ಎಂಬುದು ನಮಗೆ ಗೊತ್ತಿರಬೇಕು. ಅಲ್ಲಿ ಎಂಥ ದುರಂತಗಳು ಸಂಭವಿಸಬಹುದು, ಅದರಿಂದ



ವೈಜಾಗ್‌ಗಾಗಿ ಪ್ರಾರ್ಥನೆ
ಒಡಿಶಾದ ಪುರಿ ಕಡಲ ಕಿನಾರೆಯಲ್ಲಿ ದೇಶದ ಪ್ರಖ್ಯಾತ ಮರಳು ಕಲಾವಿದ ಸುದರ್ಶನ್ ಪಟ್ಟನಾಯಕ್‌ರಿಂದ ವೈಜಾಗ್ ದುರಂತಕ್ಕೆ ಸೃಜನಶೀಲ ಸ್ಪಂದನ